

ಲಿಂಗ ಕೋಣೆಯೆಂಬ ಕಿರು ಜಾಗವಿದೆ. ಇಲ್ಲಿ ಮುಳುಗಿ ಏಳಬಹುದು. ಇದರ ಪಕ್ಕದಲ್ಲಿ ಚತುರ್ಮುಖ ಈಶ್ವರನ ಸುಂದರ ಮೂರ್ತಿ ಇದೆ. ಈ ವಿಗ್ರಹಕ್ಕೆ ಮಂಟಪವನ್ನೂ ನಿರ್ಮಿಸಲಾಗಿದೆ. ಸುಮಾರು ನಾಲ್ಕು ಅಡಿ ನೀರು ಇರುವಂತೆಯೂ ನೋಡಿಕೊಂಡು, ಹೆಚ್ಚಾದ ನೀರನ್ನು ಹೊರಹೋಗುವಂತೆ ಕಾಲುವೆ ಕಟ್ಟನ್ನು ಕಟ್ಟಿದ್ದಾರೆ. ಹಾಗಾಗಿ ಇಲ್ಲಿಗೆ ಬರುವವರು ಸ್ವಚ್ಛಂಧವಾಗಿ ಈಜಿ ಸಂತಸಗೊಳ್ಳುತ್ತಾರೆ. ಪುಷ್ಕರಣಿಗೆ ತಳಭಾಗದವರೆಗೆ ಮೆಟ್ಟಿಲುಗಳಿವೆ. ಎಲ್ಲಾ ಕಾಲವೂ ನೀರಿನಿಂದ ತುಂಬಿರುವ ಪುಷ್ಕರಣಿ ಇದು. ಆಸುಪಾಸಿನ ನದಿ ಹಳ್ಳಗಳು ಬತ್ತಿದರೂ ಈ ನೀರಿನ ಚಿಲುಮೆ ಬತ್ತುವುದಿಲ್ಲ. ದೇವಸ್ಥಾನ ಮಂಡಳಿಯವರು ಪುಷ್ಕರಣಿಯನ್ನು ವಿಶೇಷ ಪೂಜಾ ಸಂದರ್ಭಗಳಲ್ಲಿ ಸ್ವಚ್ಛಗೊಳಿಸುತ್ತಾರೆ. ಸಂಪೂರ್ಣವಾಗಿ ನೀರನ್ನು ಹೊರಗೆ ಬಿಟ್ಟು ತಳಭಾಗದಲ್ಲಿ ಶೇಖರವಾಗಿರುವ ಹೂಳು ಏತ್ತುತ್ತಾರೆ. ಬರಿದು ಮಾಡಿದ ಕೆಲವೇ ತಾಸುಗಳಲ್ಲಿ ನೀರು ತುಂಬಿಕೊಳ್ಳುತ್ತದೆ. ನಮ್ಮ ರಾಜ್ಯದಲ್ಲಿನ ಅಪರೂಪದ ನೈಸರ್ಗಿಕ ಚಿಲುಮೆಯಿದು. ಭೂವಿಜ್ಞಾನಿಗಳು ಇದನ್ನು 'ಮೌಂಟೇನ್ ಸ್ಪ್ರಿಂಗ್' ಎಂದು ಗುರುತಿಸಿದ್ದಾರೆ.

ಎದುರಿಗಿರುವ ಮರಳುಶಿಲೆ ಬೆಟ್ಟಗಳಲ್ಲಿ ಶೇಖರಗೊಂಡಿರುವ ಮಳೆಯ ನೀರು ಇಳಿಜಾರಿನ ಭಾಗದಲ್ಲಿರುವ ಈ ಭಾಗಕ್ಕೆ ಹರಿದು ಬರುತ್ತಲೇ ಇರುತ್ತದೆ. ಅಲ್ಲದೆ ಸುತ್ತಲೂ ಆಲ, ನೀಲಗಿರಿ, ಮಾವು, ಅತ್ತಿ ಹಣ್ಣು ಮುಂತಾದ ಮರಗಳ ಬೇರುಗಳು ಅಪಾರವಾದ ನೀರನ್ನು ಹೀರಿಕೊಳ್ಳುತ್ತವೆ. ಮಹಾಕೂಟದ ವಿಷ್ಣು ಪುಷ್ಕರಣಿ ದೊಡ್ಡ ಅಂತರ್ಜಲ ಭಂಡಾರವೇ ಹೌದು. ಈ ಭಾಗದ ಬೆಟ್ಟಗುಡ್ಡ ಗಳ ಇಳಿಜಾರಿನಲ್ಲಿ ಹರಿದುಬರುವ ನೀರು ಭೂಮೇಲ್ಮೈ ಸ್ವರೂಪದಲ್ಲಿನ ಅಂತರ್ಜಲ ಮಟ್ಟ ಛೇದಿಸಿದ್ದು, ನೀರಿನ ಚಿಲುಮೆ ರೂಪುಗೊಂಡಿದೆ. ತನ್ನ ಮಟ್ಟವನ್ನು ಕಾಯ್ದುಕೊಂಡು ಮುಂದೆ ಚಿಕ್ಕ ಕಾಲುವೆಯಲ್ಲಿ ನಿರಂತರವಾಗಿ ಹರಿದು ಹೋಗುವ ನೀರು ಸುತ್ತಲಿನ ಜಮೀನು ಮತ್ತು ತೋಟಗಳಿಗೂ



ಸೇರುತ್ತದೆ. ದೇಗುಲದ ಆವರಣದಲ್ಲಿಯೇ ಆಲ, ಅತ್ತಿ ಮತ್ತು ಒಂದು ಬಗೆಯ ಸಂಪಿಗೆ ಮರಗಳು ವ್ಯಾಪಿಸಿರುವದರಿಂದ ಈ ಕ್ಷೇತ್ರ ಸುಂದರವಾಗಿ ಕಾಣುತ್ತದೆ.

ಇಲ್ಲಿ ಮಹಾಕೂಟೇಶ್ವರ ದೇವಸ್ಥಾನ ಮಂಡಳಿ ವತಿಯಿಂದ ನಿತ್ಯವೂ ಎರಡು ಹೊತ್ತು ಭಕ್ತಾದಿಗಳಿಗೆ ದಾಸೋಹ ನಡೆಯುತ್ತದೆ. ಕಲ್ಯಾಣ ಮಂಟಪವೂ ಇದೆ. ವರ್ಷಕ್ಕೊಮ್ಮೆ ರಥೋತ್ಸವ ನಡೆಯುತ್ತದೆ. ಅಗಿ ಹುಣ್ಣಿಮೆಯಂದು (ಸಾಮಾನ್ಯವಾಗಿ ಮೇ ತಿಂಗಳಲ್ಲಿ) ರಥೋತ್ಸವ. ಬಾದಾಮಿಯಿಂದ 14 ಕಿ.ಮೀ. ದೂರದಲ್ಲಿರುವ ಮಹಾಕೂಟಕ್ಕೆ ಸಂಚಾರ ವ್ಯವಸ್ಥೆ ಇದೆ. ವ್ಯಾನ್‌ಗಳು ನಿರಂತರವಾಗಿ ಓಡಾಡುತ್ತವೆ.